ಆಟೆನ್‌ಷನ್ ಆಗಿ ಮಾಡಬಹುದು ರೂಲ್ ೬೮ ಪ್ರಕಾರ ಅವಕಾಶ ಕೊಡಬಹುದು. ನಿಮಗೆ ಅಧಿಕಾರ ಇದೆ, ಆದರೆ ಇಲ್ಲಿ ಅನನ್ನು ಮುಂದುವರಿಸಲು ಬರುವುದಿಲ್ಲ, ಒಂದು ಬಾರಿ ತೀರ್ಮಾನ ಕೊಟ್ಟಮೇಲೆ ಅದೇ ಅಂತಿಮ ಎಂಬ ಮಾತನ್ನು ಅವರೂ ಹೇಳಿದ್ದಾರೆ. ತಾವು ಸೀನಿಯರ್ ಮೋಸ್ಟ್ ಲೆಜಿಸ್ಲೇಟರ್ ಇದ್ದೀರಿ. ನಿಮಗೆ ನಾನು ಇದನ್ನೆಲ್ಲಾ ಹೇಳಿಕೊಡಬೇಕೆ. You are a good lawyer but you are arguing a bad case.

ಶ್ರೀ ಎಂ. ಎಸ್. ಕೃಷ್ಣನ್.—ತಮ್ಮ ರಕ್ಷಣೆಯನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು.—ಈಗ ರೂಲಿಂಗ್ ಕೊಟ್ಟು ಆಗಿದೆ. ತಾವು ದಯವಿಟ್ಟು ನನ್ನ ಚೇಂಬರ್‌ಗೆ ಬನಿ. ನನ್ನನ್ನು ಕನ್‌ವಿನ್ಸ್ ಮಾಡಿರಿ. ಒಂದು ತಾಸು ನಾನು ಅಲ್ಲಿರುತ್ತೇನೆ. ತಾವು ದಯವಿಟ್ಟು ಕುಳಿತು ಕೊಳ್ಳಿ. ಈಗ ಗಮನ ಸೆಳೆಯುವ ಸೂಚನೆಗಳು. ಶ್ರೀ ಬಿ. ಎಸ್. ಯಡಿಯೂರಪ್ಪನವರು.

ಗಮನ ಸೆಳೆಯುವ ಸೂಚನೆ

ಪಂಚಗಂಗಾ ನದಿಯ ನೀರನ್ನು ನೀರಾವರಿಗೆ ಉಪಯೋಗಿಸದಂತೆ ನಿಷೇಧಾಜ್ಞೆ ಹೊರಡಿಸಿ ಹೊರ ರಾಜ್ಯದವರಿಗೆ ಅನುಕೂಲ ಮಾಡಿರುವ ಬಗ್ಗೆ

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ ಮೇಲಿನ ವಿಷಯದ ಬಗ್ಗೆ ನಾನು ಮಾನ್ಯ ಕಂದಾಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಮಂತ್ರಿ ಯೋಜನಾ ಸಚಿವರು) —ಮಾನ್ಯ ಅಧ್ಯಕ್ಷರೇ ಈ ಕೆಳಕಂಡ ಹೇಳಿಕೆಯನ್ನು ನಾನು ಕೊಡಬಯಸುತ್ತೇನೆ. ಮಹಾರಾಷ್ಟ್ರ ರಾಜ್ಯದ.....

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಇದು ಯಾವ ವಿಚಾರ ಎಂದು ನನಗೆ ಗೊತ್ತಾಗಲಿಲ್ಲ.....

ಅಧ್ಯಕ್ಷರು.—ನಿಮ್ಮ ನಿಲುವಳಿ ಸೂಚನೆ ಮತ್ತು ಶ್ರೀ ಎಂ. ಎಸ್. ಕೃಷ್ಣನ್‌ನವರು ತಂದ ಎರಡು ವಿಷಯಗಳು ಬಿಟ್ಟು ಈಗ ಮೂರನೇ ವಿಷಯಕ್ಕೆ ಹೋಗಿದ್ದೇವೆ.....

ಶ್ರೀ ಎಸ್. ಬಂಗಾರಪ್ಪ.—ನಾವು ತಂದಂತಹ ನಿಲುವಳಿ ಸೂಚನೆಗೆ ತಾವು ಆದ್ಯತೆಯನ್ನು ಕೊಡಲೇಬೇಕು.

ಅಧ್ಯಕ್ಷರು.—ನಿಮ್ಮ ಮತ್ತು ಎಂ. ಎಸ್. ಕೃಷ್ಣನ್‌ನವರು ತಂದಂತಹ ವಿಷಯ ಮುಗಿದು ಈಗ ಗಮನ ಸೆಳೆಯುವ ಸೂಚನೆಗೆ ಹೋಗಿದ್ದೇವೆ. ಅದೇ ರೀತಿ ಶ್ರೀ ಯಡಿಯೂರಪ್ಪನವರು ಮಾನ್ಯ ಮಂತ್ರಿಗಳ ಗಮನ ಸೆಳೆದಿದ್ದಾರೆ. ಈಗ ಮಾನ್ಯ ಯೋಜನಾ ಸಚಿವರು ಉತ್ತರ ಕೊಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಈ ವಿಷಯದಲ್ಲಿ ಚರ್ಚೆಯಾಗಲೇಬೇಕು. ನೀವು ನಮಗೆ ದಯವಿಟ್ಟು ಅವಕಾಶ ಮಾಡಿಕೊಡಿ.

MR. SPEAKER.—The matter has been closed.

SRI S BANGARAPPA.—I am sorry, ನೀವು ಮಾನ್ಯ ಸದಸ್ಯರಾದ ಎಂ. ಎಸ್ ಕೃಷ್ಣನ್‌ರವರಿಗೆ ಅವಕಾಶ ಕೊಟ್ಟಿದ್ದೀರೆಂದು ತಿಳಿದು, ನಿಮಗೆ ಗೌರವ ಕೊಟ್ಟು ನಾವು ಕುಳಿತು ಕೊಂಡಿದ್ದುದು, ಅಂದ ಮೇಲೆ ನಿಮ್ಮ ವಿಷಯ ಮುಗಿದು ಹೋಯಿತು ಎಂದರೆ ಹೇಗೆ ? ದಯವಿಟ್ಟು ತಾವು ವಿಷಯ ಚರ್ಚೆ ಮಾಡುವುದಕ್ಕೆ ಈ ಸಭೆಯಲ್ಲಿ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ಮಾನ್ಯ ಕಂದಾಯ ಮಂತ್ರಿ ಯೋಜನಾ ಸಚಿವರ ಉತ್ತರವಲ್ಲದೇ ಬೇ ಯಾವುದನ್ನು ರೆಕಾರ್ಡ್ ಮಾಡಬಾರದು.* * *

***Not recorded as ordered by the Chair.

ಶ್ರೀ ಎಸ್. ಬಂಗಾರಪ್ಪ.— ತಾವು ದಯಮಾಡಿ ಚರ್ಚೆಗೆ ಅವಕಾಶ ಮಾಡಿ ಕೊಡಬೇಕು.

ಅಧ್ಯಕ್ಷರು.— ಇಲ್ಲ. ನಾನು ಆಗಲೇ ತೀರ್ಮಾನವನ್ನು ಕೊಟ್ಟಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.— ತಾವು ದಯವಿಟ್ಟು ಕ್ಷಮಿಸಬೇಕು. ಈ ರೀತಿಯಾದರೆ ನಾವು ಈ ಸಭೆಯಲ್ಲಿ ಭಾಗವಹಿಸುವುದು ಕಷ್ಟವಾಗುತ್ತದೆ.

ಅಧ್ಯಕ್ಷರು.— ದಯಮಾಡಿ ತಾವು ಕುಳಿತುಕೊಳ್ಳಿ. Don"t record.

(ಗೊಂದಲ)

ಅಧ್ಯಕ್ಷರು.— ವಿಧಾನ ಸಭೆಯನ್ನು ದಿಕ್ಕಾರ ಮಾಡುವ ಹಕ್ಕು ನಿಮಗೆ ಇಲ್ಲ. ನಿಮ್ಮ ಮೇಲೆ ನಾನು ಕ್ರಮ ತೆಗೆದುಕೊಳ್ಳುವುದಕ್ಕೆ ಬರುತ್ತದೆ. ಆದರೆ ನಾನು ಕ್ರಮ ತೆಗೆದುಕೊಳ್ಳುವುದಿಲ್ಲ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.— ನೀವು ಕ್ರಮ ತೆಗೆದುಕೊಳ್ಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.— ನಾನು ಯಾರ ಮೇಲೂ ಕ್ರಮ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಆ ರೀತಿ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಸಂಗ ಬಂದರೆ ಪ್ರತಿ ದಿವಸವೂ ತೆಗೆದುಕೊಳ್ಳಬೇಕಾಗುತ್ತದೆ. ಆದರೂ ನಿಮಗೆ ನಾನು ಬುದ್ಧಿವಾದ ಹೇಳುತ್ತಿದ್ದೇನೆ. ದಯಮಾಡಿ ಕುಳಿತುಕೊಳ್ಳಿ. ಕ್ರಮ ತೆಗೆದುಕೊಳ್ಳಬೇಕೆಂದರೆ ನಾರಾಯಣಸ್ವಾಮಿಯವರ ಮೇಲೆ ದಿನವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ನಾನು ಅವರ ಮೇಲೂ ಕ್ರಮ ತೆಗೆದುಕೊಳ್ಳುವುದಿಲ್ಲ. ನಿಮ್ಮ ಮೇಲೂ ಕ್ರಮ ತೆಗೆದುಕೊಳ್ಳುವುದಿಲ್ಲ. ಬುದ್ಧಿವಾದ ಹೇಳುವುದು ನನ್ನ ಕರ್ತವ್ಯ.

(ಗೊಂದಲ)

೧-ಪಿ.ಎಂ.

ಅಧ್ಯಕ್ಷರು.— ಕೂಡ್ರಿ, ಮಾನ್ಯ ಬಂಗಾರಪ್ಪನವರೇ ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.— ನಾವು ಅಡ್ಜರ್ನಮೆಂಟ್ ಮೊಷನ್‌ನನ್ನು ಮೊದಲೇ ಕಳುಹಿಸಿ ಕೊಟ್ಟಿದ್ದೇವೆ. ಹಿಂದೆ ಎಲ್ಲಾ ಈ ರೀತಿಯ ಕನ್‌ವೆನ್‌ಷನ್ಸ್ ಇದೆ.

(ಗೊಂದಲ)

ಶ್ರೀ. ಎ. ಲಕ್ಷ್ಮೀಸಾಗರ್.— ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಅಧಿಕಾರವನ್ನು

(ಗೊಂದಲ)

(ವಿರೋಧ ಪಕ್ಷದ ಸದಸ್ಯರುಗಳಿಲ್ಲವಾ ಒಟ್ಟಿಗೆ ಎದ್ದು ನಿಂತು ವಿರೋಧವನ್ನು ಸೂಚಿಸುವಾಗ ಯಾವುದೇ ಪದಗಳು ಸರಿಯಾಗಿ ಕೇಳಿಸುತ್ತಿರಲಿಲ್ಲ.)

(ಗೊಂದಲ)

ಅಧ್ಯಕ್ಷರು.— ವಿರೋಧ ಪಕ್ಷದ ನಾಯಕರಾದ ಶ್ರೀಮತಿ ನಾಗರತ್ನಮ್ಮನವರು ಇವರ ಬಗ್ಗೆ ಮಾತನಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೂ ಇದರ ಮೇಲೆ ಮಾತನಾಡಿದ ಮೇಲೆ ನಾನು ರೂಲಿಂಗ್ ಕೊಟ್ಟಿದ್ದೇನೆ. ನಾನು ಈಗ ಯಾರನ್ನೂ ಮಾತನಾಡುವುದಕ್ಕೆ ಅಲೋ ಮಾಡುವುದಿಲ್ಲ.

(ಗೊಂದಲ)

ಅಧ್ಯಕ್ಷರು.— ವಿರೋಧಿ ಪಕ್ಷದ ನಾಯಕರು ಕೆಲವು ಮಾತುಗಳನ್ನು ಹೇಳಿದ್ದರು.

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಅಡ್ಜರ್ನ್‌ಮೆಂಟ್ ಮೋಷನ್‌ಗೆ ಅವಕಾಶ ಕೊಡಿ ಎಂದೇ ನಾನು ಹೇಳಿದ್ದುದು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.— ಇದರಲ್ಲಿ ಪಾಯಿಂಟ್ ಆಫ್ ಆರ್ಡರ್ ಎಲ್ಲಿ ಬರುತ್ತದೆ?

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.— ಯಾರೂ ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿಲ್ಲ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.— ಈ ರೀತಿ ಆದರೆ, ವಿರೋಧಪಕ್ಷ ಯಾವ ರೀತಿ ಕೆಲಸ ಮಾಡಬೇಕು.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.— ಈ ರೀತಿ ನೀವು ಕೂಗಾಡುವುದನ್ನು ಜನ ನೋಡಿ ನಗುತ್ತಿದ್ದಾರೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.— ನೀವು ಈ ಕಡೆ ಮೊದಲು ಕಂಳಿತಂಕೊಳ್ಳುತ್ತಿದ್ದಾಗ ಏನು ಮಾಡುತ್ತಿದ್ದೀರಿ ಎಂದು ನನಗೆ ಇನ್ನೂ ನೆನಪು ಇದೆ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.— ನಿಮ್ಮನ್ನು ನೋಡಿ ಜನ ನಗುತ್ತಿದ್ದಾರೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.— ನೀವು ಮಾಡುವುದನ್ನು ನೋಡಿ ಜನ ಅಳುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು.— ಇಲ್ಲಿ ಪಾಯಿಂಟ್ ಆಫ್ ಆರ್ಡರ್ ಪ್ರಶ್ನೆ ಇಲ್ಲ. ಇದರ ಬಗ್ಗೆ ಮಾತನಾಡುವುದಕ್ಕೆ ಶ್ರೀಮತಿ ನಾಗರತ್ನಮ್ಮನವರಿಗೆ ಅವಕಾಶ ಕೊಟ್ಟ ಮೇಲೆ ಮಾನ್ಯ ಸಭಾ ನಾಯಕರೂ ಮಾತನಾಡಲಿ ಎಂದು ನಾನು ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು.— ಚೀಫ್ ಮಿನಿಸ್ಟರ್ ಮಾತನಾಡುವಾಗ ಮಧ್ಯೆ ಪಾಯಿಂಟ್ ಆಫ್ ಆರ್ಡರ ಪ್ರಶ್ನೆ ಬರುವುದಿಲ್ಲ. ಅವರು ಏನು ಹೇಳುತ್ತಾರೋ ಆದನ್ನು ನೋಡಿಕೊಂಡು ನಾನು ಡಿಸೀಷನ್ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ಈ ಒಂದು ವಿಚಾರವನ್ನು ಡಿಸ್ಕಸ್ ಮಾಡಬೇಕಾದರೆ ಅದರ ಬಗ್ಗೆ ಅಮೆಂಡ್‌ಮೆಂಟ್‌ನ್ನು ಮಾಡಿದ ಮೇಲೆ ಮಾತನಾಡಬೇಕೆಂದು ರೂಲ್ಸ್ ಎಲ್ಲಿ ಇದೆ? ಮಾನ್ಯ ಬೊಮ್ಮಾಯಿಯವರೇ ನೀವು ತಿಳಿದವರು.

ಶ್ರೀ ಎಸ್. ಆರ್. ಬೊಮ್ಮಾಯಿ.— ಒಂದು ಕಾನೂನು ಬಗ್ಗೆ ಮತ್ತು ನಿಯಮಾವಳಿಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಅಡ್ಜರ್ನ್‌ಮೆಂಟ್ ಮೋಷನ್ ತಂದದ್ದು ಯಾವಾಗಲೂ ಮಾಡಿಲ್ಲ. ಈ ರೀತಿ ನಮ್ಮ ಕಾಲದಲ್ಲೂ ನಾವು ಮಾಡಿಲ್ಲ. ದಯವಿಟ್ಟು ಜವಾಬ್ದಾರಿಯಿಂದ ಇದನ್ನು ವಿಚಾರ ಮಾಡಿ.

ಶ್ರೀ ಎಸ್. ಬಂಗಾರಪ್ಪ.— ಯಾವುದರ ಮೇಲೆ ಎಂದು ನಾವು ಅಡ್ಜರ್ನ್‌ಮೆಂಟ್ ಮೋಷನ್ ಕೊಡಬೇಕೆಂದು ಮಾನ್ಯ ಅಧ್ಯಕ್ಷರಿಗೆ ಸ್ಪಷ್ಟವಾಗಿ ತಿಳಿಸಿ ನೋಟೀಸನ್ನು ಕಳುಹಿಸಿಕೊಟ್ಟಿದ್ದೇವೆ.

ಶ್ರೀ ಎಸ್. ಆರ್, ಬೊಮ್ಮಾಯಿ.—ಈ ವಿಚಾರವನ್ನು ಎತ್ತ ಬೇಕಾದರೆ.....

ಶ್ರೀ ಎಸ್. ಬಂಗಾರಪ್ಪ.— ನಿಯಮಾವಳಿಗಳನ್ನು ಆಡ್ಜರ್ನ್‌ಮೆಂಟ್‌ಮೋಷನ್ ಮೂಲಕ ಮಾಡಬೇಕೆಂದು ನಾವು ಕೇಳುಹಿಸಿಲ್ಲ.....

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ, ಎಷ್ಟು ಹೊತ್ತಿನ ತನಕ ಒಂದು ವಿಷಯದ ಮೇಲೆ ತಕರಾರು ಮಾಡುವುದು ? ಇಲ್ಲಿ ಕೂಗಾಡುವುದು ಒಂದೇ ಕೆಲಸವೇ ? .....

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಮಾನ್ಯರಲ್ಲಿ ಅತೀ ವಿನಯದಿಂದ ಈ ಸದನದಲ್ಲಿ ಕೇಳಿ ಕೊಳ್ಳುತ್ತಾ ಇದ್ದೇನೆ. ತಾವು ಚರ್ಚೆ ಮಾಡತಕ್ಕಂಥ ವಿಚಾರ ಬಹಳ ಗಂಭೀರವಾದಂತಹ ವಿಚಾರ. ಲೋಕಾಯುಕ್ತ ಕಾನೂನಿನ ಬಗ್ಗೆ ಹೇಳುವುದಾದರೆ ರಾಷ್ಟ್ರದಲ್ಲಿರತಕ್ಕಂಥ ಭ್ರಷ್ಟಾಚಾರದ ವಿರುದ್ಧವಾಗಿ, ರಾಜಕೀಯ ಭ್ರಷ್ಟಾಚಾರದ ವಿರುದ್ಧವಾಗಿ ಅಂತಹವುಗಳನ್ನು ತಡೆಯುವುದಕ್ಕಾಗಿ ಈ ಕಾನೂನಿನ ಆವಶ್ಯಕತೆ ಇದೆ. ಇಂತಹ ವಿಚಾರವನ್ನು ಚರ್ಚೆ ಮಾಡುವಾಗ ಬಹಳ ಜವಾಬ್ದಾರಿಯಿಂದ ಇದರಲ್ಲಿ ಭಾಗವಹಿಸ ಬೇಕಾಗುತ್ತದೆ. ಈ ಲೋಕಾಯುಕ್ತ ಸಂಸ್ಥೆ ಏನಿದೆ ಆ ಸಂಸ್ಥೆಯ ಗೌರವವನ್ನು ನಾವು ಕಾಪಾಡಬೇಕು.

(ಗೊಂದಲ)

ಆ ಸಂಸ್ಥೆಯ ಘನತೆಯನ್ನು, ಗೌರವವನ್ನು, ಎತ್ತಿ ಹಿಡಿಯತಕ್ಕಂಥಾದ್ದು ನಮ್ಮೆಲ್ಲರ ಆದ್ಯಕರ್ತವ್ಯ ವಾಗಿದೆ. ಇಲ್ಲಿ ವ್ಯಕ್ತಿಗೆ ಮಹತ್ವವಿಲ್ಲ. ವ್ಯಕ್ತಿಗಳು ಶಾಶ್ವತವಲ್ಲ. ಆದುದರಿಂದ ಆ ಸಂಸ್ಥೆಯ ಘನತೆ ಗೌರವಗಳನ್ನು ಸದಾಕಾಲ ಎತ್ತಿ ಹಿಡಿಯುವ ರೀತಿಯಲ್ಲಿ, ಅದರ ಗೌರವ ಶಾಶ್ವತವಾಗಿ ಉಳಿ ಯುವ ರೀತಿಯಲ್ಲಿ ನಾವುಗಳು ಇಲ್ಲಿ ನಡೆದುಕೊಳ್ಳಬೇಕಾಗಿದೆ. ಅದೇ ರೀತಿಯಲ್ಲಿ ಇದು ಕೇವಲ ಕರ್ನಾಟಕ ರಾಜ್ಯಕ್ಕೆ ಅಷ್ಟೇ ಸೀಮಿತವಾಗಿಲ್ಲ. ಇದು ಬೇರೆ ರಾಜ್ಯಗಳಲ್ಲಿಯೂ ಬರಬೇಕಾಗಿದೆ. ಕೇಂದ್ರದಲ್ಲಿಯೂ ಬರುವುದಿದೆ. ನಾವೆಲ್ಲರೂ ಸಾರ್ವಜನಿಕರ ಟೀಕೆಗೆ ಒಳಗಾಗದ ರೀತಿಯಲ್ಲಿ ನಡೆದು ಕೊಳ್ಳಬೇಕಾಗುತ್ತದೆ. ಸಾರ್ವಜನಿಕರು ನಮ್ಮನ್ನು ಸಂಶಯದಿಂದ ನೋಡುತ್ತಾ ಇದ್ದಾರೆ.....ನಾನು ಹೇಳುತ್ತಿರುವುದು ಸರ್ವೆ ಸಾಮಾನ್ಯವಾಗಿ ರಾಷ್ಟ್ರದಲ್ಲಿಯ ವಾತಾವರಣ.....

ಶ್ರೀ ಎಸ್. ಬಂಗಾರಪ್ಪ.—ಎಲ್ಲರೂ ಸಂಶಯದಿಂದ ನೋಡುತ್ತಾರೆ..... ರಾಜಕೀಯದಲ್ಲಿ ಯಾರೂ ಪೂರ್ತಿಯಾಗಿ ಜನರಿಗೆ ಸರಿಯಾಗಿ ನಡೆದುಕೊಳ್ಳುವುದಕ್ಕಾಗುವುದಿಲ್ಲ..... .....

ಶ್ರೀ ಎಸ್. ಆರ್. ಬೊಮ್ಮಾಯಿ.—ರಾಜಕೀಯ ಪಕ್ಷಗಳ ಬಗ್ಗೆ, ರಾಜಕೀಯ ಮುಖಂಡರ ಬಗ್ಗೆ ಜನರು ಒಂದು ಸಂಶಯದ ದೃಷ್ಟಿಯಿಂದ ನೋಡತಕ್ಕಂಥ ವಾತಾವರಣ ಬರುತ್ತಿರುವಾಗ, ನಾವು ಇವೊತ್ತು.....ನಾವು ಈ ರೀತಿಯಲ್ಲಿ ಚರ್ಚೆ ಮಾಡುವುದು ಸರಿಯಲ್ಲ. ತಾವು ತಮ್ಮ ಚೇಂಬರ್ ನಲ್ಲಿ ವಿರೋಧಪಕ್ಷದ ನಾಯಕರನ್ನು ಕರೆದು ಚರ್ಚೆ ಮಾಡುವುದಕ್ಕೆ, ಆಲೋಚನೆ ಮಾಡುವುದಕ್ಕೆ ಹೇಳಿ ದ್ದೀರಿ. ಆದುದರಿಂದ ಇದನ್ನು ಇಲ್ಲಿಗೆ ನಿಲ್ಲಿಸಬೇಕು. ಹೀಗೆಯೇ ಮುಂದುವರಿಸುವುದು ಸರಿಯಲ್ಲ...

(ಗೊಂದಲ)

ಅಧ್ಯಕ್ಷರು.— ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು. ತಾವುಗಳೆಲ್ಲರಿಗೂ ನಾನು ಆಗ ಅವಕಾಶ ಕೊಟ್ಟಿದ್ದೇನೆ. ಮಾನ್ಯ ಸಚಿವ ಬೊಮ್ಮಾಯಿಯವರು ಉತ್ತರವನ್ನು ಕೊಟ್ಟಿದ್ದಾರೆ.....

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಲೋಕಾಯುಕ್ತ ಕಾನೂನನ್ನು ಮಾಡಬೇಕಾದರೆ, ಸಾರ್ವಜನಿಕ ಜೀವನದಲ್ಲಿರತಕ್ಕಂಥವರ ಮೇಲೆ ಆಪಾದನೆಗಳು ಬಂದಾಗ ವಿಚಾರ ಮಾಡಬಾರದು ಎಂದು ಹೇಳಲಿಲ್ಲ. ನಾವು ಲೋಕಾಯುಕ್ತ ಕಾನೂನನ್ನು ವಿರೋಧ ಕೂಡ ಮಾಡಲಿಲ್ಲ.....

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೇ.....

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರು ದಯವಿಟ್ಟು ಕುಳಿತುಕೊಳ್ಳಬೇಕು. ಮಾನ್ಯ ಯಡಿ ಯೂರಪ್ಪನವರು ತಮ್ಮ ಗಮನ ಸೆಳೆಯುವ ಸೂಚನೆಯನ್ನು ಮುಂದಿಸಬೇಕು.

(ಗೊಂದಲ)

ಗಮನ ಸೆಳೆಯುವ ಸೂಚನೆ

ಶ್ರೀ ಬಿ. ಎಸ್. ಯಡಿಯೂರಪ್ಪ.—ಪಂಚಗಂಗಾ ನದಿಯ ನೀರನ್ನು ನೀರಾವರಿಗೆ ಉಪಯೋಗಿಸದಂತೆ ನಿಷೇಧಾಜ್ಞೆ ಹೊರಡಿಸಿ, ಹೊರ ರಾಜ್ಯದವರಿಗೆ ಅನುಕೂಲ ಮಾಡಿರುವ ಬಗ್ಗೆ ಕಂದಾಯ ಮಂತ್ರಿ ಯೋಜನಾ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ(ಕಂದಾಯ ಹಾಗೂ ಯೋಜನಾ ರಾಜ್ಯ ಸಚಿವರು).—ಮಹಾರಾಷ್ಟ್ರ ರಾಜ್ಯದ ಇಂಚಾಲಕ ರಂಜಿ ನಗರವು ಕುಡಿಯುವ ನೀರಿಲ್ಲದೆ ವಿಪರೀತ ತೊಂದರೆಗೆ ಒಳಗಾಗಿದ್ದುದರಿಂದ ಕೊಲ್ಲಾಪುರ ಕಾರ್ಯನಿರ್ವಾಹಕ ಅಭಿಯಂತರರ ಮಾನವೀಯ ಮೇರೆಗೆ ಮಾನವೀಯತೆಯ ದೃಷ್ಟಿಯಿಂದ ರಾಜ್ಯದ ಮನಕಾಪುರ ಗ್ರಾಮಕ್ಕೆ ವ್ಯವಸಾಯ ಕಾರಣಕ್ಕಾಗಿ ಪಂಚಗಂಗಾ ನದಿ ನೀರನ್ನು ಬಳಸದೆ ಇರುವಂತೆ ತಡೆಯಾಜ್ಞೆ ನೀಡುವಂತೆ ಚಿಕ್ಕೋಡಿ ತಾಲ್ಲೂಕು ಮ್ಯಾಜಿಸ್ಟ್ರೇಟರನ್ನು ಕೋರಲಾಯಿತು. ಅದರಂತೆ ದಿನಾಂಕ ೨೪-೧೨-೮೭ ರಂದು ತಡೆಯಾಜ್ಞೆಯನ್ನು ಹೊರಡಿಸಲಾಯಿತು. ಈ ರೀತಿಯ ಆದೇಶವನ್ನು ಈ ಹಿಂದೆಯೂ ಮಹಾರಾಷ್ಟ್ರ ಸರ್ಕಾರದ ಅಧಿಕಾರಿಗಳ ಮಾನವೀಯ ಮೇರೆಗೆ ಹೊರಡಿಸಲಾಗಿದೆ. ಇದೇ ರೀತಿಯ ಆದೇಶವನ್ನು ಕೃಷ್ಣಾ ನದಿಯ ದಂಡೆಯಲ್ಲಿರುವ ಗ್ರಾಮಸ್ಥರಿಗೂ ಕೃಷ್ಣಾ ನದಿಯ ನೀರನ್ನು ವ್ಯವಸಾಯಕ್ಕಾಗಿ ಉಪಯೋಗಿಸದೇ ಇರಲು ನೀಡಲಾಗಿದೆ. ಇಂತಹ ಮಾನವೀಯತೆಯನ್ನು ಕರ್ನಾಟಕ ಸರ್ಕಾರವು ಸಂಕೇಶ್ವರ ನಗರಕ್ಕೆ ನೀರು ಒದಗಿಸುವ ಸಲುವಾಗಿ ಮಹಾರಾಷ್ಟ್ರ ಸರ್ಕಾರವನ್ನು ಹಿರಣ್ಯಕೇಶಿ ನದಿ ನೀರಿನ ಬಗ್ಗೆ ಮನವಿಸಲ್ಲಿಸಿದ್ದು ಆ ಸರ್ಕಾರವು ಮಾನವೀಯತೆಯನ್ನು ಪರಿಗಣಿಸಿ ಸೂಕ್ತ ಆದೇಶವನ್ನು ಹೊರಡಿಸಿದೆ. ಈ ಪದ್ಧತಿಯು ಇದೇ ಮೊದಲ ಬಾರಿಯಲ್ಲಿ ಕಳೆದ ೨ ವರ್ಷ ಮತ್ತು ೩ ವರ್ಷಗಳಿಂದ ನಡೆಯುತ್ತಿದೆ.

ಶಿರಾಢವಾಡ ಮಂಡಲ ಪಂಚಾಯತಿ ಪ್ರಧಾನರು, ವ್ಯವಸಾಯಗಾರರು ಮತ್ತು ಸಾದಲಗ ಕ್ಷೇತ್ರದ ವಿಧಾನ ಸಭಾ ಸದಸ್ಯರು ಸದರಿ ಪ್ರತಿಬಂಧಕಾಜ್ಞೆಯನ್ನು ಹಿಂತೆಗೆದುಕೊಳ್ಳುವಂತೆ ಮನವಿ ಸಲ್ಲಿಸಿದ್ದರು. ಈ ಬಗ್ಗೆ ಚಿಕ್ಕೋಡಿ ಉಪ ವಿಭಾಗಾಧಿಕಾರಿಯವರ ಮೂಲಕ ವಿಚಾರಣೆ ನಡೆಸಲಾಗಿ, ಮನವಿಯಂತೆ ಸತ್ಯವಾಗಿರುತ್ತದೆಂದು ಕಂಡು ಬರಲಾಗಿ ದಿನಾಂಕ ೨೪-೧೨-೮೭ರಂದು ವಿಧಿಸಿದ್ದ ಪ್ರತಿಬಂಧಕಾಜ್ಞೆಯನ್ನು ದಿನಾಂಕ ೧೧-೧-೮೮ರಂದು ಹಿಂತೆಗೆದುಕೊಳ್ಳಲಾಯಿತು. ಈಗ ಪಂಚಗಂಗಾ ನದಿಯ ನೀರನ್ನು ವ್ಯವಸಾಯ ಕಾರಣಕ್ಕಾಗಿ ಉಪಯೋಗಿಸಿಕೊಳ್ಳಲು ಪ್ರತಿಬಂಧ ಇರುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ನಥಿಂಗ್ ವಿಲ್ ಗೋ ಆನ್ ರೆಕಾರ್ಡ್.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮಗೆ ಅವಕಾಶ ಮಾಡಿಕೊಡಬೇಕು.

(ಗೊಂದಲ)

ಅಧ್ಯಕ್ಷರು.—ಈಗ ನೀವು ಏನು ಮಾತನಾಡಿದರೂ ಕೂಡ ರೆಕಾರ್ಡ್‌ಗೆ ಹೋಗುವುದಿಲ್ಲ. ಚೇಂಬರ್‌ಗೆ ಬನ್ನಿ ಡಿಸ್‌ಕಷನ್ ಮಾಡೋಣ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ನಮ್ಮ ಕರ್ನಾಟಕ ಜನತೆಗೆ ಅನ್ಯಾಯವಾಗಿದೆ.....

(ಗೊಂದಲ)

ಅಧ್ಯಕ್ಷರು.—ನಥಿಂಗ್ ವಿಲ್ ಗೋ ಆನ್ ರೆಕಾರ್ಡ್.

(ವಿರೋಧೀ ಪಕ್ಷದಲ್ಲಿನ ಹಲವಾರು ಸದಸ್ಯರು ಒಮ್ಮೆಲೆ ಎದ್ದು ನಿಂತು ಮಾತನಾಡತೊಡಗಿದರು.)

ಶ್ರೀ ಬಿ.ಎಸ್. ಯಡಿಯೂರಪ್ಪ.—ಪಂಚ ಗಂಗಾ ನದಿಯಂ ನೀರನ್ನು ನೀರಾವರಿಗೆ ಉಪಯೋಗಿಸ ದಂತೆ ನಿಷೇದಾಜ್ಞೆ ಹೊರಡಿಸಿ, ಹೊರ ರಾಜ್ಯದವರಿಗೆ ಅನುಕೂಲ ಮಾಡಿರುವ ಬಗ್ಗೆ...

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, ನಮಂಗೆ...

(ಗೊಂದಲ)

ಅಧ್ಯಕ್ಷರಂ.—ಮಂಂದಿನ ಗಮನ ಸೆಳೆಯುವ ಸೂಚನೆ ಶ್ರೀ ಡಿ.ಟಿ. ಜಯಕುಮಾರ್‌ರವರು ಮಂತ್ರಿಗಳ ಗಮನವನ್ನು ಸೆಳೆಯಂಬೇಕಂ.

(ಗೊಂದಲ)

ಅಧ್ಯಕ್ಷರಂ.—ಸಭೆ ನಡೆಯುವುದಕ್ಕೆ ಈ ರೀತಿ ಅಡೆತಡೆ ಮಾಡುವುದಂ ಸರಿಯಲ್ಲ. ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ತಾವು ಚೇಂಬರ್‌ಗೆ ಬನ್ನಿ.

(ಗೊಂದಲ)

ಶ್ರೀ ಎಸ್.ಆರ್. ಬೊಮ್ಮಾಯಿ.—ಮಹಾರಾಷ್ಟ್ರದ ನೌಕರರನ್ನು...

(ಗೊಂದಲ)

ಅಧ್ಯಕ್ಷರಂ.—ಚೇಂಬರ್‌ಗೆ ಬನ್ನಿ ಓರ ಮೇಲೆ ಇದನ್ನು ತೆಗೆದುಕೊಳ್ಳೋಣವೋ, ಇಲ್ಲವೇ ಕಾಲಿಂಗ್ ಅಟೆನ್‌ಷನ್‌ನಲ್ಲಿ ತೆಗೆದುಕೊಳ್ಳೋಣವೋ ಎಂಬುದನ್ನು ಚರ್ಚೆ ಮಾಡೋಣ. ನೀವು ೪-೫ ಜನ ಮುಖಂಡರಂ ಬನ್ನಿ ಕುಳಿತಂ ಚರ್ಚೆ ಮಾಡೋಣ. ಈ ತರಹ ಮಾಡುವುದು ಸರಿಯಲ್ಲ. ಮಾನ್ಯ ಲಕ್ಕಪ್ಪನವರೇ ದಯವಿಟ್ಟು ಕುಳಿತುಕೊಳ್ಳಿ, ನೀವು ಲಕ್ಷಾಂತರ ಜನರಿಂದ ಆರಿಸಿ ಬಂದಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಜನರಿಂದ ಆರಿಸಿ ಬಂದಿದ್ದೇವೆ, ನಮಗೆ ಅವಕಾಶ ಮಾಡಿಕೊಡಿ.

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ,...

(ಗೊಂದಲ)

ಅಧ್ಯಕ್ಷರು.—ಎಲ್ಲರೂ ಕುಳಿತುಕೊಳ್ಳಿ. ಶ್ರೀಮತಿ ನಾಗರತ್ನಮ್ಮನವರು ಕೆಲವು ಮಾತುಗಳನ್ನು ಹೇಳಿದರು. ನಂತರ ಮಾನ್ಯ ಮುಖ್ಯಮಂತ್ರಿಗಳು ಎದ್ದು ನಿಂತು ನಾನು ಹೇಳಿದೆ, ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡಲು ಅಲೋ ಮಾಡಿದ್ದೇನೆ. ಪಾಯಿಂಟ್ ಆಫ್ ಆರ್ಡರ್ ಇಲ್ಲ ನೀವು ಕುಳಿತಂ ಕೊಳ್ಳಿ ಎಂದು. ಅಂದರೆ ತಮಗೆ ಅಲೋ ಮಾಡಿಲ್ಲವೆಂದಂ ಅರ್ಥವಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡಲು ಅಲೋ ಮಾಡಿದ್ದೇನೆ. ಅವರು ಮಾತನಾಡಲಿ ಎಂದು ನಾನು ತೀರ್ಮಾನ ಕೊಟ್ಟಿದ್ದೇನೆ. ಈಗ ಮಾನ್ಯ ಕೃಷ್ಣನ್‌ರವರ ಅಡ್ಜರ್ನ್‌ಮೆಂಟ್ ಮೋಷನ್ ಕೂಡ ಮುಗಿದಿದೆ. ನೀವು ಮಂತ್ರಿ ಕೆ.ಹೆಚ್. ಪಾಟೀಲ್‌ರವರು, ಬಸವಲಿಂಗಪ್ಪನವರೂ ಬನ್ನಿ ಕುಳಿತು ಮಾತನಾಡೋಣ ಓರ ಪ್ರಕಾರ ತೆಗೆದುಕೊಳ್ಳಬೇಕೋ ಇಲ್ಲವೇ ಕಾಲಿಂಗ್ ಅಟೆಷನ್ ಎಂದಂ ತೆಗೆದುಕೊಳ್ಳಬೇಕೋ ಎಂದು. ಈ ರೀತಿ ಮಾತನಾಡುವುದು ಸರಿಯಲ್ಲ. ನಾನು ರೂಲಿಂಗ್ ಕೊಟ್ಟಿದ್ದೇನೆ. ರೂಲಿಂಗ್ ಕೊಟ್ಟ ನಂತರ ಮಾತನಾಡುವುದು ಸರಿಯಲ್ಲ. ಈಗ ಮಾನ್ಯ ಯಡಿಯೂರಪ್ಪನವರ ಕಾಲಿಂಗ್ ಅಟೆಷನ್‌ಗೆ ಉತ್ತರ ಕೂಡ ಹೇಳಿಯಾಗಿದೆ. ಅದು ಕೂಡ ಮುಗಿದಿದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ.—ಎಲ್ಲಿ ಮುಗಿಯುತ್ತದೆ ಈ ಗಲಾಟೆ...

(ಗೊಂದಲ)

ಶ್ರೀ ಎಂ.ಎಸ್. ಕೃಷ್ಣನ್.—ಈ ರೂಲಿಂಗ್ ನಮಂಗೂ ಕೂಡ ಅಪ್ಲೈ ಆಗುತ್ತದೆಯೇ ?

(ಗೊಂದಲ)

ಅಧ್ಯಕ್ಷರು.—ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡಲು ಎದ್ದಾಗ ಇವರನ್ನು ಕೂಡಿ ಎಂದು ಹೇಳಿದ್ದೇನೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳುತ್ತಿದ್ದರು, ಅದಕ್ಕೆ ಪಾಯಿಂಟ್ ಆಫ್ ಆರ್ಡರ್ ಎಂದು ಎತ್ತಿದರು...

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದರಿಂದ ಏನಾಗುತ್ತದೆ ಎಂದರೆ...

(ಗೊಂದಲ)

MR. SPEAKER.—Nothing will go on record.

(INTERRUPTION)

ಶ್ರೀ ಎಸ್.ಆರ್. ಬೊಮ್ಮಾಯಿ.—ಕರ್ನಾಟಕ ರೈತರಿಗೆ ಏನು ತೊಂದರೆಯಾಗಿದೆ...

(ಗೊಂದಲ)

ಅಧ್ಯಕ್ಷರು.—ರೂಲ್ಸ್, ರೆಗ್ಯುಲೇಷನ್ಸ್ ಎಲ್ಲಾ ಗಾಳಿಗೆ ತೂರಿದರೆ ಏನು ಮಾಡಲಿ ? ಅದು ಆಗುವುದಿಲ್ಲ ಎಂದು ಈಗಾಗಲೇ ಹೇಳಿಬಿಟ್ಟಿದ್ದೇನೆ.

(ಗೊಂದಲ)

SRI S.R. BOMMAI.—I have already read the statement.

(INTERRUPTION)

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ..... Nothing will go on record.

(ಗೊಂದಲ)

ಅಧ್ಯಕ್ಷರು.—ಇದರಲ್ಲಿ ಪಾಯಿಂಟ್ ಆಫ್ ಆರ್ಡರ್ ಪ್ರಶ್ನೆಯೇ ಇಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡುವಾಗ ಪಾಯಿಂಟ್ ಆಫ್ ಆರ್ಡರ್ ಎತ್ತಿದರು...

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ...

MR. SPEAKER.—The matter has been closed. Nothing will go on record. Whatever you (Sri S. Bangarappa) spoke will be expunged. ನಾನು ಬೊಮ್ಮಾಯಿಯವರನ್ನು ಕರೆದಿದ್ದೇನೆ. ಅವರು ಓದಲಿಕ್ಕೆ ಹತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು.—ಅದು ಆಗುವುದಿಲ್ಲ, ನಾನು ನೋಡುವುದಿಲ್ಲ. ಆ ಪ್ರಶ್ನೆ ಮುಗಿದು ಹೋಗಿದೆ. Nothing will go on record. ನಾನು ಈಗ ಪಾಯಿಂಟ್ ಆಫ್ ಆರ್ಡರ್‌ಗೆ ಅವಕಾಶ ಕೊಡುವುದಿಲ್ಲ. ಈಗಾಗಲೇ ಹೇಳಿದ್ದೇನೆ, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಸ್.ಆರ್. ಬೊಮ್ಮಾಯಿ.—ಅಧ್ಯಕ್ಷರೇ, ನಮ್ಮ ಉತ್ತರ ಇಷ್ಟೇ ಇದೆ...

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ನಾವು ಕಳಂಹಿಸಿರತಕ್ಕಂಥ ನಿಲಂವಳಿ ಸೂಚನೆ ವಿಷಂ ಇದೆ, ಅದಕ್ಕೆ ಅವಕಾಶ ಮಾಡಿಕೊಡಬೇಕಂ.

(ಗೊಂದಲ)

ಶ್ರೀ ಎಸ್.ಆರ್. ಬೊಮ್ಮಾಯಿ.—ಅಧ್ಯಕ್ಷರೇ ..

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಬೇಡ ಇದು ಬೊಮ್ಮಾಯಿಯವರೇ, ಇದು ಒಳ್ಳೆಯದಲ್ಲ.

(ಗೊಂದಲ)

ಅಧ್ಯಕ್ಷರು.—ತಾವು ದಯವಿಟ್ಟು ಕೂಳಿತುಕೊಳ್ಳಿ. Nothing will go on record.

x x x

ಶ್ರೀ ಎಸ್. ಬಂಗಾರಪ್ಪ.—ಈ ರೀತಿ ಸದನವನ್ನು ನಡೆಸಿದರೆ ಬಹಳ ಕಷ್ಟವಾಗುತ್ತದೆ. ನಮ್ಮ ಮನವಿಯನ್ನು ತಾವು ರೀ-ಕನ್‌ಸಿಡರ್ ಮಾಡಬೇಕು. ತಾವು ದಯಮಾಡಿ ನಮಗೆ ಅವಕಾಶ ಕೊಡಬೇಕಂ.

Mr. Speaker.—The matter has been closed. ಈಗ ನೀವು ಏನು ಹೇಳಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ.....

(ಗೊಂದಲ)

ಅಧ್ಯಕ್ಷರು.—ಇದು ಆಗುವುದಿಲ್ಲ ಮಾನ್ಯ ವೆಂಕಟರಾವಂಯ್ಯನವರೇ, ತಮ್ಮದು ಈಗ ಕಾಲಿಂಗ್ ಅಟೆನ್‌ಷನ್. ಮಾನ್ಯ ಯಡಿಯೂರಪ್ಪನವರೇ, ತಾವು ಕೂಳಿತುಂಕೊಳ್ಳಿ.

(ಗೊಂದಲ)

Sri B. Basavalingappa.—Sir, I rise to a point of order.

Mr. Speaker.—No point. of order.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ದಯಮಾಡಿ ತಾವು ನನಗೆ ಅವಕಾಶ ಕೊಡಬೇಕಂ.

(ಗೊಂದಲ)

ಅಧ್ಯಕ್ಷರು.—ಆಗುವುದಿಲ್ಲ.....

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ರಾಜ್ಯದ ರೈತರಿಗೆ ಅನ್ಯಾಯವಾಗಿದೆ ಎಂದು ಹೇಳಿದಾಗ ಇದರ ಬಗ್ಗೆ ಎಷ್ಟು ಮಹತ್ವ ಕೊಡಬೇಕೋ ಅಷ್ಟು ಮಹತ್ವವನ್ನು ದಯವಿಡಿ ಸನ್ಮಾನ್ಯ ಮಂತ್ರಿಗಳು ಕೊಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ನನ್ನ ಉದ್ದೇಶ ವಿನೆಂದರೆ...

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಬೆಳಗಾಂ ಜಿಲ್ಲಾಧಿಕಾರಿಗಳು ಮಹಾರಾಷ್ಟ್ರದ ಜನತೆಗೆ...

ಶ್ರೀ ಬಿ. ಬಸವಲಿಂಗಪ್ಪ.—ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ.

ಅಧ್ಯಕ್ಷರು.—ಸಾಧ್ಯವಿಲ್ಲ, ನಾವು ಯಾರನ್ನೂ ಮಾತನಾಡಲು ಅಲೋ ಮಾಡುವುದಿಲ್ಲ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಆ ಜಿಲ್ಲಾಧಿಕಾರಿಗೆ ರೈತರು ನೀರನ್ನು ತೆಗೆದುಕೊಳ್ಳದಂತೆ ತಡೆ ಆಜ್ಞೆ ಹೊರಡಿಸಲು ಅಧಿಕಾರ ಇದೆಯೇ.....?

(ಗೊಂದಲ)

SRI B. BASAVALINGAPPA.—I rise to a Point of Order. What are we doing here ?

(Interruption)

MR. SPEAKER.—Nothing will go on record.

SRI. S. BANGARAPPA—This is very unfair.

(Interruption)

ಅಧ್ಯಕ್ಷರು.—ರೂಲಿಂಗ್ ಕೊಟ್ಟ ಮೇಲೆ ಅದರ ಮೇಲೆ ಈ ರೀತಿ ಅನ್‌ಫೇರ್ ಆಗಿ ತಾವು ಮಾತನಾಡುವುದು ಸರಿಯಲ್ಲ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಹೇಳಿದ್ದನ್ನು ನಾನು ಕೇಳಿದ್ದೇನೆ. ಆ ಆಜ್ಞೆಯನ್ನು ಹಿಂದಕ್ಕೆ ತೆಗೆದುಕೊಂಡಿದ್ದೇವೆ. ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳುತ್ತೇವೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಈ ರೀತಿ ಆದರೆ ನಾವು ಈ ಸದನದಲ್ಲಿ ಏಕೆ ಇರಬೇಕು ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಸದಸ್ಯರಾದ ಬಸವಲಿಂಗಪ್ಪನವರು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡುತ್ತಿದ್ದಾರೆ. ಅವರಿಗೆ ನೀವು ಅವಕಾಶ ಕೊಡಬೇಕು.

MR. SPEAKER.—Nothing will go on record.

(Interruption)

ಅಧ್ಯಕ್ಷರು.—ಮಾನ್ಯ ಸಚಿವರಾದ ಬೊಮ್ಮಾಯಿಯವರನ್ನು ಬಿಟ್ಟು ಬೇರೆ ಯಾರು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ತಾವುಗಳು ಈ ಬಗ್ಗೆ ಏನಾದರೂ ಹೇಳುವುದಿದ್ದರೆ ನನ್ನ ಛೇಂಬರ್‌ಗೆ ಬಂದು ಹೇಳಿ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಬಂಗಾರಪ್ಪನವರು ಎತ್ತಿರುವ ಪ್ರಶ್ನೆಯ ಬಗ್ಗೆ ತಾವು ಒಂದು ಅಂತಿಮ ತೀರ್ಮಾನ ತೆಗೆದುಕೊಳ್ಳುವುದು ಒಳ್ಳೆಯದು.

ಶ್ರೀ ಎಂ. ಎಸ್. ಕೃಷ್ಣನ್.—ಈಗ ಸಭೆಯು ಆರ್ಡರ್‌ನಲ್ಲಿ ಇಲ್ಲ. ಆದರೂ ಸಹ ಗವರ್ನರ ಸೆಳೆಯುವ ಸೂಚನೆಯ ಬಗ್ಗೆ ಪ್ರಸ್ತಾಪ ಮಾಡಲು ತಾವು ಏತಕ್ಕೆ ಅವಕಾಶ ಕೊಟ್ಟಿರಿ ?

ಶ್ರೀ ಎಸ್. ಬಂಗಾರಪ್ಪ.—ಮೊದಲು ನಮ್ಮ ನಿಲುವಳಿ ಸೂಚನೆ ಬಗ್ಗೆ ತೀರ್ಮಾನವಾಗಬೇಕು.

ಅಧ್ಯಕ್ಷರು.—ನಿಯಮ ೬೮ ಅಥವಾ ಬೇರೆ ಯಾವ ನಿಯಮಗಳ ಪ್ರಕಾರ ಇದನ್ನು ಇಲ್ಲಿ ಚರ್ಚೆ ಮಾಡಬಹುದು ಎಂಬ ಬಗ್ಗೆ ಪರಿಶೀಲನೆ ಮಾಡಲು ತಾವು ನನ್ನ ಛೇಂಬರ್‌ಗೆ ಬಂದು ನೋಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಲೋಕಾಯುಕ್ತದ ಬಗ್ಗೆ ಬೇಕಾದರೆ ತಿದ್ದುಪಡಿ ತರೋಣ. ಆದರೆ ಅದಕ್ಕೂ ಮೊದಲು ತಾವು ಇಲ್ಲಿ ಚರ್ಚೆ ಮಾಡಲು ಏತಕ್ಕೆ ಅವಕಾಶ ಕೊಡಬಾರದು?

ಅಧ್ಯಕ್ಷರು —ಲೋಕಾಯುಕ್ತದ ವರದಿಯನ್ನು ಈ ಸಭೆಯ ಮುಂದೆ ಇಟ್ಟಮೇಲೆ, ಆದರ ಮೇಲೆ ಚರ್ಚೆಗೆ ಅವಕಾಶವಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಹೇಳಿದ್ದಾರೆ. ಈಗ ಮಾನ್ಯ ವೆಂಕಟರಾಮಯ್ಯನವರು ತಮ್ಮ ಗಮನ ಸೆಳೆಯುವ ಸೂಚನೆ ಬಗ್ಗೆ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯಬಹುದು. ಅವರನ್ನು ಬಿಟ್ಟು ಬೇರೆ ಯಾರು ಮಾತನಾಡಿದರೂ ಅದು ರೆಕಾರ್ಡಿಗೆ ಹೋಗುವುದಿಲ್ಲ. ನಾನು ಯಾರಿಗೂ ಅಲೋ ಮಾಡುವುದಿಲ್ಲ.

ಶ್ರೀ ಎಂ. ರಘುಪತಿ.—ತಾವು ರೂಲಿಂಗ್ ಕೊಟ್ಟಮೇಲೂ ಸಹ ಅವರು ಈ ರೀತಿ ಮಾತನಾಡುವುದು ಸರಿಯಲ್ಲ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ನಾನು ರೂಲಿಂಗ್ ಕೊಟ್ಟಮೇಲೆ ತಾವು ಈ ರೀತಿ ಧಿಕ್ಕಾರ ಮಾಡುವುದು ಸರಿಯೇ ?

ಶ್ರೀ ಎಸ್. ಬಂಗಾರಪ್ಪ.—ನಾನು ಧಿಕ್ಕಾರ ಮಾಡಲಿಲ್ಲ. ಈ ಬಗ್ಗೆ ತಮ್ಮ ಮನ ಒಲಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ.

(ಗೊಂದಲ)

ಅಧ್ಯಕ್ಷರು.—ತಾವು ಕೂಡಿ. ಮಾನ್ಯ ವೆಂಕಟರಾಮಯ್ಯನವರೆ ತಾವು ಕಾಲಿಂಗ್ ಅಟೆನ್‌ಷನ್ ಕೇಳಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ,.....

(ಗೊಂದಲ)

ಅಧ್ಯಕ್ಷರು.—ಸಭೆ ನಡೆಯುವುದಕ್ಕೆ ದಯವಿಟ್ಟು ತಾವು ಅಡೆತಡೆ ಮಾಡಬಾರದು.

(ಗೊಂದಲ)

MR. SPEAKER —Nothing will go on record.

(ಗೊಂದಲ)

ಅಧ್ಯಕ್ಷರು:—ಮಾನ್ಯ ವೆಂಕಟರಾಮಯ್ಯನವರೇ, ತಾವು ಕಾಲಿಂಗ್ ಅಟೆನ್‌ಷನ್ ಕೇಳುತ್ತೀರೋ ಇಲ್ಲವೋ, ನಾನು ಮುಂದಿನ ವಿಷಯಕ್ಕೆ ಹೋಗಲೇ ?

SRI R. VENKATARAMAIAH.—Sir, I call the attention of the Minister for Information, Tourism, Culture & Bangalore Development Authority to the inadequate coverage of Kannada Programmes by Bangalore Doordarshan Centre.

ಶ್ರೀ ಎಸ್. ಬಂಗಾರಪ್ಪ,—ಮಾನ್ಯ ಸಭಾಧ್ಯಕ್ಷರೆ,.....

ಅಧ್ಯಕ್ಷರು.—ದಯವಿಟ್ಟು ತಾವು ಕುಳಿತುಕೊಳ್ಳಿ ರೂಲಿಂಗ್ ಕೊಟ್ಟು ಆಗಿದೆ. Matter has been closed. ಎಂದು ಹೇಳಿದ್ದೇನೆ.

ಶ್ರೀ ಎಂ. ಪಲ್ಲಿಕಾರ್ಜುನ ಖಾರ್ಗೆ.—ದಯವಿಟ್ಟು ಸ್ವಲ್ಪ ಕೇಳಿ.

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಚಿವರು).—ಮಾನ್ಯ ಅಧ್ಯಕ್ಷರೆ,

(ಗೊಂದಲ)

೧–೩೦ ಪಿ. ಎಂ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇದರ ಬಗ್ಗೆ ಚರ್ಚೆ ಮಾಡಬೇಕು. ಅದಕ್ಕೆ ಸರ್ಕಾರದವರು ಒಪ್ಪುತ್ತಾ ಇಲ್ಲ. ಸೆಕ್ಷನ್ ೧೬ರ ಪ್ರಕಾರ ಅವರು ಕಾನೂನು ಉಲ್ಲಂಘನೆ ಮಾಡಿದ್ದಾರೆ. ಇದರ ಬಗ್ಗೆ ಚರ್ಚೆ ಮಾಡಬೇಕು. ಅದಕ್ಕೆ ತಾವು ದಯವಿಟ್ಟು ಅವರಿಗೆ ಮನವೊಲಿಸಿ ಅವಕಾಶ ಮಾಡಿಕೊಟ್ಟರೆ ಒಳ್ಳೆಯದು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇವತ್ತಿನ ದಿವಸ ಅವರ ಆಟಿಟ್ಯೂಡ್ ಏನಿದೆ ಅದನ್ನು ಪ್ರೊಟೆಸ್ಟ್ ಮಾಡಿ ನಾವು ವಾಕೌಟ್ ಮಾಡುತ್ತೇವೆ.

(ಕಾಂಗ್ರೆಸ್ ಪಕ್ಷದ ಶಾಸಕರು ಸಭಾತ್ಯಾಗ ಮಾಡಿದರು)

ಶ್ರೀ ಎಂ.ಎಸ್. ಕೃಷ್ಣನ್.—ಸರ್ಕಾರಕ್ಕೆ ಸಲಹಾ ರೂಪದಲ್ಲಿ ನಾನು ಒಂದು ಲೆಟರ್ ಕಳಿಸಿದ್ದೆ. ತಮ್ಮ ರೂಲಿಂಗನ್ನು ನಾನು ವಿರೋಧ ಮಾಡುವುದಿಲ್ಲ.

ಅಧ್ಯಕ್ಷರು.—ನಾನು ತಮಗೆ ಈಗ ಅಲೋ ಮಾಡುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಪಂಪಾಪತಿಯವರು ಮತ್ತು ಮಾನ್ಯ ಭೂಪತಿಯವರು ತಮ್ಮ ಹತ್ತಿರ ಚರ್ಚೆ ಮಾಡಬಹುದಲ್ಲವೇ? ಸೆಕ್ಷನ್ ೬೮ರ ಪ್ರಕಾರ ಆ ವಿಷಯವನ್ನು ತಾವು ಕನ್ವರ್ಟ್ ಮಾಡಬಹುದಲ್ಲವೇ?

ಅಧ್ಯಕ್ಷರು.—ಈಗ ನಿವಂಗೂ ಅವಕಾಶ ಇದೆ, ಅವರಿಗೂ ಅವಕಾಶವಿದೆ. ನನ್ನ ಛೇಂಬರಿಗೆ ನೀವೂ ಅವರೂ ಕೂಡಿ ಬನ್ನಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ಕೃಷ್ಣನ್‌ರವರು ಏನು ಒಂದು ಸೂಚನೆ ಕೊಟ್ಟಿದ್ದಾರೆ, ಅದನ್ನು ತಾವು ದಯವಿಟ್ಟು ಗಮನಿಸಬೇಕು. ಈ ಮನೆಯಲ್ಲಿ ಈ ವಿಷಯವನ್ನು ಚರ್ಚೆ ಮಾಡಕೂಡದು ಎನ್ನುವುದು ನಮ್ಮ ಇಚ್ಛೆಯಲ್ಲ. ಇಲ್ಲಿ ಚರ್ಚೆಯಾಗುವಷ್ಟು ಬೇರೆ ಯಾವುದೇ ಸಭೆಯಲ್ಲೂ, ಲೋಕ ಸಭೆಯಲ್ಲೂ ಚರ್ಚೆ ಆಗುವುದಿಲ್ಲ. ಚರ್ಚೆ ಆಗಬೇಕು ಆದರೆ ಯಾವ ವಿಷಯ ಯಾವ ಹೊತ್ತಿಗೆ ಯಾವ ಸಂದರ್ಭದಲ್ಲಿ ಯಾವ ನಿಯಮದ ಪ್ರಕಾರ ಚರ್ಚೆ ಆಗಬೇಕು ಎನ್ನುವುದನ್ನು ತೀರ್ಮಾನ ಮಾಡುವವರು ತಾವು, ತಾವು ಏನು ತೀರ್ಮಾನ ಮಾಡುತ್ತೀರೋ ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಹಾಗೆ ಅಧ್ಯಕ್ಷರು ತೀರ್ಮಾನ ಮಾಡಿದ ಮೇಲೆ ಅದಕ್ಕೆ ವಿರೋಧವಾದ ರೀತಿಯಲ್ಲಿ ಗಂಟೆಗಟ್ಟಲೆ ಈ ಮನೆಯ ಸಮಯವನ್ನು ವ್ಯಯ ಮಾಡಿದಂಥ ಉದಾಹರಣೆ ಬೇರೆ ಕಡೆ ಸಿಗಲಿಕ್ಕಿಲ್ಲ. ಯಾರಾದರೂ ಒಬ್ಬರು ಸದಸ್ಯರು ಈ ಮನೆಯಲ್ಲಿ ಆ ರೀತಿ ವರ್ತನೆ ಮಾಡಿ They should not be allowed to hold this House to reasons. ಆ ಒಂದು ಉದ್ದೇಶ ಅವರ ಮನಸ್ಸಿನಲ್ಲಿ ಇರಬಹುದು, ಇದ್ದರೆ ಅವರು ವಾಕೌಟ್ ಮಾಡಿಕೊಂಡು ಹೋಗಲಿ, ಅಭ್ಯಂತರವಿಲ್ಲ. ಆ ಉದ್ದೇಶ ಇದ್ದರೆ ಈ ರೀತಿ ಪ್ರತಿದಿವಸ ಯಾವುದಾದರೂ ವಿಚಾರ ತೆಗೆದುಕೊಂಡು ಬರುವುದು, ಪ್ರತಿ ದಿವಸ ಅಡ್ಜರ್ನ್‌ಮೆಂಟ್ ಮೋಷನ್ ತಂದರೆ ನಾಳೆ ಅಡ್ಜರ್ನ್‌ಮೆಂಟ್ ಮೋಷನ್‌ಗೆ ಏನು ಅರ್ಥ ಇರುತ್ತದೆ? ವಿಷಯ ಅಂತಹ ಗಂಭೀರವಾಗಿ ಇರಬೇಕು, ರೂಲ್ ಪ್ರಕಾರ ಯಾವರೀತಿ ಅದು ಮೋಷನ್‌ನಲ್ಲಿ ಬರಬೇಕೋ ಆ ರೀತಿ ಬರಬೇಕು. ಇನ್ನು ಮುಂದೆ ತಮ್ಮ ಉದಾರ ನೀತಿಗಳನ್ನು ನಮ್ಮಲ್ಲಿ ಅನೇಕ ಜನರು ದುರುಪಯೋಗ ಮಾಡಿಕೊಳ್ಳಲಿಕ್ಕೆ ತಾವು ಅವಕಾಶ ಕೊಡಕೂಡದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು.—ತಾವು ಮಂತ್ರಿಗಳ ಹತ್ತಿರ ಹೋಗಿ ಕುಳಿತುಕೊಂಡು ಡಿಸ್ಕಸ್ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು.—ನಿಮ್ಮದು ಮುಗಿದುಹೋಗಿದೆ, ತಾವು ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಸ್ವಾಮಿ, ನನಗೆ ಉತ್ತರ ಸಿಕ್ಕಿಲ್ಲ. ಸ್ಪಷ್ಟೀಕರಣ ಕೇಳಿತ್ತಿದ್ದೇನೆ. ನಾನು ಮುಂಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ನಾನು ನಿಯಮ ೬೪ರ ಪ್ರಕಾರ ಕರ್ನಾಟಕ ರಾಜ್ಯದ ವಿಜಯಪುರ ಗ್ರಾಮದ ರೈತರಿಗೆ ಪಂಚಗಂಗಾ ನದಿಯಿಂದ ನೀರು ಕೊಡಲಾಗುತ್ತಿತ್ತು

ಶ್ರೀ ಯು. ಭೂಪತಿ.—ಸ್ವಾಮಿ. ವೆಂಕಟರಾಪುಯ್ಯನವರನ್ನು ಕರೆದಿದ್ದೀರಿ. ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಿದ್ದರು. ಅದನ್ನು ಬಿಟ್ಟು ಬೇರೆ ವಿಚಾರವನ್ನು ತೆಗೆದುಕೊಂಡು ಮತ್ತೆ ಹಿಂದಕ್ಕೆ ಹೋಗುತ್ತಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಹಿಂದಕ್ಕೆ ಹೋಗುತ್ತಿಲ್ಲ. ಧ್ವನಿಯನ್ನು ಎತ್ತರಿಸಿ ಮಾತನಾಡಿದ್ದರಿಂದ ಮಂತ್ರಿಗಳಿಗೆ ಕೇಳಿರಬಹುದೆಂದು ತಿಳಿದುಕೊಂಡಿದ್ದರು ಎಂದು ಕಾಣುತ್ತದೆ.

ಶ್ರೀ ಯು. ಭೂಪತಿ.—ಮಾನ್ಯ ಮಂತ್ರಿಗಳು ಆವರಿಗೆ ಉತ್ತರ ಕೊಟ್ಟಿದ್ದಾರೆ. ಅದನ್ನು ಬಿಟ್ಟು ಮತ್ತೆ ಹಿಂದಕ್ಕೆ ಏತಕ್ಕೆ ಹೋಗುತ್ತಿದ್ದೀರಿ.

ಅಧ್ಯಕ್ಷರು.—ನಿಮಗೂ ಕೊಡುತ್ತಾರೆ.

ಶ್ರೀ ಯು. ಭೂಪತಿ.—ಆವರಿಗೆ ಅವಕಾಶ ಕೊಡುವುದಕ್ಕೆ ನನ್ನ ವಿರೋಧ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಪಂಚಗಂಗಾ ನದಿ ನೀರನ್ನು ಪಂಪುಸೆಟ್ಟು ಮೂಲಕ ರೈತರು ಉಪಯೋಗಿಸಿಕೊಳ್ಳುತ್ತಿದ್ದರು. ಅದಕ್ಕೆ ಜಿಲ್ಲಾಧಿಕಾರಿಗಳು ತಡೆಯಾಜ್ಞೆ ಕೊಟ್ಟು ರೈತರ ಹಿತವನ್ನು ಕಡೆಗಣಿಸಿ, ಮಹಾರಾಷ್ಟ್ರದ ಹಿಂಚಲಗಿ ಗ್ರಾಮಕ್ಕೆ ಕುಡಿಯುವ ನೀರನ್ನು ಒದಗಿಸಿದ್ದಾರೆ. ಹಿಂದೆ ಮಹಾರಾಷ್ಟ್ರದವರು ಹಿರಣ್ಯಕೇಶಿ ನೀರನ್ನು ಕೇಳಿದಾಗ ಹೆಚ್ಚುವರಿ ನೀರು ಕೊಟ್ಟಿದ್ದರು. ಜಿಲ್ಲಾಧಿಕಾರಿಗಳು ಹಿಂದೆ ಕೆಪಿಎಸ್‌ಸಿ,ಯಲ್ಲಿದ್ದಾಗ ಆವರ ಮೇಲೆ ಆರೋಪ ಇತ್ತು. ರೈತರ ಹಿತವನ್ನು ಕಡೆಗಣಿಸಿ, ನೀರು ಕೊಟ್ಟಿದ್ದಾರೆ. ಸರ್ಕಾರದ ಪರವಾನಗಿಯನ್ನು ತೆಗೆದುಕೊಟ್ಟು ನೀರು ಕೊಟ್ಟಿದ್ದಾರೆಯೆ?

ಶ್ರೀ ಎಸ್ ಆರ್. ಬೊಮ್ಮಾಯಿ.—ಮಾನ್ಯ ಸಭಾಪತಿಗಳೇ, ಕುಡಿಯುವ ನೀರಿನ ವಿಚಾರದಲ್ಲಿ ಆದ್ಯತೆಯನ್ನು ಕೊಡಬೇಕಾಗುತ್ತದೆ. ಇದು ರಾಷ್ಟ್ರೀಯ ನೀತಿ ಕೂಡ ಆಗಿದೆ. ಹಿಂದೆ ಕೂಡ ಈ ರೀತಿಯ ಮನವಿಗಳು ಬಂದಾಗ ನಮ್ಮ ಅಧಿಕಾರಿಗಳು ವ್ಯವಸಾಯಕ್ಕೆ ಬಳಸುವ ನೀರನ್ನು ನಿಲ್ಲಿಸಿ ಕುಡಿಯುವುದಕ್ಕೆ ನೀರನ್ನು ಕೊಟ್ಟಿದ್ದಾರೆ. ಅಂಥ ಒಂದು ಆದಿಕಾರ ಜಿಲ್ಲಾಧಿಕಾರಿಗಳಿಗೆ, ತಹಶೀಲ್ದಾರರುಗಳಿಗೆ ಇದೆ. ಸಂಕೇಶ್ವರ ನಗರಕ್ಕೆ ಕುಡಿಯುವ ನೀರು ಕೊಡಿ ಎಂದು ಮಹಾರಾಷ್ಟ್ರದ ಅಧಿಕಾರಿಗಳನ್ನು ಕೇಳಿಕೊಂಡಾಗ, ಇದೇ ರೀತಿಯ ಆಜ್ಞೆಯನ್ನು ಮಹಾರಾಷ್ಟ್ರದ ಅಧಿಕಾರಿಗಳು ಹೊರಡಿಸಿದ್ದರು. ಅಲ್ಲಿನ ಶಾಸಕರುಗಳು ಮತ್ತು ರೈತರು ಮನವಿ ಮಾಡಿದ ಮೇಲೆ ಪುನಃ ಇದರ ಬಗ್ಗೆ ಆಲೋಚನೆ ಮಾಡಿದ್ದಾರೆ. ವಿದ್ಯುಚ್ಛಕ್ತಿ ನಿಯಂತ್ರಣ ಇರುವುದರಿಂದ ೮ ತಾಸು ಮಾತ್ರ ನೀರನ್ನು ಉಪಯೋಗವಾಡಿಕೊಳ್ಳಬಹುದು. ಅಧಿಕಾರಿಗಳು ಕೆಲವು ಸಂದರ್ಭಗಳಲ್ಲಿ ಸಮಯಕ್ಕೆ ಸರಿಯಾಗಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಉಭಯ ರಾಜ್ಯಗಳಲ್ಲಿಯೂ ಕುಡಿಯುವ ನೀರಿನ ಸಮಸ್ಯೆ ಬಂದಾಗ ಇಂಥ ಒಂದು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇದನ್ನು ಉದ್ದೇಶಪೂರ್ವಕವಾಗಿ ಮಾಡಿದ್ದಾರೆನ್ನುವುದು ಸರಿಯಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಕುಡಿಯುವ ನೀರು ಕೊಡುವುದಕ್ಕೆ ನನ್ನ ವಿರೋಧ ಇಲ್ಲ. ನಮ್ಮ ರೈತರಿಗೆ ತೊಂದರೆಕೊಟ್ಟು ನೀರು ಕೊಡುವುದು ಸರಿಯ ಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕುಡಿಯುವ ನೀರಿನ ವಿಚಾರದಲ್ಲಿ ಇಂಥ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇದರಲ್ಲಿ ಅಂತಹ ವಿಚಾರವೇನು ಇಲ್ಲ. ಕೆಲವು ವಿಚಾರಗಳನ್ನು ಹೇಳಿದ್ದೇವೆ, ಇದರ ಬಗ್ಗೆ ವಿಚಾರ ಮಾಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅವರು ಮಾಡಿದ್ದುದು ಸರಿ ಎಂದು ಕಂಡಮೇಲೆ ಏತಕ್ಕೆ ತಾವಸ್ ತೆಗೆದುಕೊಂಡಿರಿ? ಈ ಜಿಲ್ಲಾಧಿಕಾರಿ ಆಜ್ಞೆ ಮಾಡುವುದಕ್ಕೆ ಮುಂಚೆಯೇ ಯೋಚನೆ ಮಾಡಬೇಕಾಗಿತ್ತು, ನಾನು ಇವ್ಹೊತ್ತು ಕುಡಿಯುವ ನೀರನ್ನು ಕೊಡಬೇಡಿ ಎಂದು ಹೇಳುವುದಿಲ್ಲ. ಮನಸ್ಸಿಗೆ ಬಂದಂತೆ ಆಜ್ಞೆ ಮಾಡುವ ಅಧಿಕಾರಿ ಬಗ್ಗೆ ತಾವು ವಿಚಾರ ಮಾಡಬೇಕು. ಈ ತರಹ ಆಜ್ಞೆ ಮಾಡುವುದನ್ನು ತಪ್ಪಿಸಬೇಕು. ರೈತರು ಹೋರಾಟ ಮಾಡಿದ ಮೇಲೆ ಶಾಸಕರು ಬಂದು ಮನವಿ ಕೊಟ್ಟಮೇಲೆ ವಾಪಸ್ಸು ತೆಗೆದುಕೊಂಡರು ಅಂದರೆ ಹೇಗೆ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮುಂದೆ ಇಂತಹ ಕ್ರಮ ತೆಗೆದುಕೊಳ್ಳುವಾಗ ಮುಂದಾಲೋಚನೆ ಮಾಡಿ ಮಾಡುವಹಾಗೆ ತಿಳಿಸುತ್ತೇವೆ.